THE KARNATAKA GOVERNMENT PARKS (PRESERVATION) (AMENDMENT) BILL, 1976 AS PASSED BY THE LEGISLATIVE COUNCIL

motion to consider

SRI K. T. RATHOD (Minister of State for Fisheries and Horticulture).—Sri, I beg to move :

> 'That the Karnataka Government Parks (Preservation) (Amendment) Bill, 1976 as passed by the Legislative Council be taken into consideration.'

MR. DEPUTY SPEAKER.—Motion moved :

> "That the Karnataka Government Parks (Preservation) (Amendment) Bill, 1976 as passed by the Legislative Council be taken into consideration.'

† ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿ ಮಸೂದೆ ಬಹಳ ಸಣ್ಣದು ಮತ್ತು ಸರಳವಾದುದು ಆಗಿದೆ. Under Section 4 of the Karnataka Government Parks Preservation Act, ಯಾವುದೇ ಜಮೀನು 'ಪಾರ್ಕ್ಸ್' ಎಂದು ಹೇಳಿ ನೋಟಿಫಿಕೇಷನ್ ಮಾಡಿದವುಗಳನ್ನು ಪರಭಾರೆ ಮಾಡುವುದಕ್ಕೆ ಬರುತ್ತಾ ಇರಲಿಲ್ಲ. ಆದರೆ ಈಗ ಲಾಲ್‌ಬಾಗಿನಲ್ಲಿ, ವೀರ ಕನ್‌ಸ್ಟ್ರಕ್ಷನ್ ಟ್ರಸ್ಟ್‌ನವರು ಒಂದು ವೀರಸೌಧ ಕಟ್ಟಿಸಬೇಕೆಂದು ಹೇಳಿ ಮನವಿ ಮಾಡಿಕೊಂಡಿದ್ದರಿಂದ ಮೊದಲಿದ್ದ ಕಾನೂನಿನಲ್ಲಿ ತಿದ್ದುಪಡಿ ತರಬೇಕಾಗಿ ಬಂತು. ಈ ಒಂದು ವೀರಸೌಧದ ಕಾರ್ಯಕ್ರಮವನ್ನು ಸ್ವಾತಂತ್ರ್ಯ ಯೋಧರ ನೆನಪಿಗಾಗಿ ಒಪ್ಪಿಕೊಂಡಿದ್ದರಿಂದ ಈ ತಿದ್ದುಪಡಿ ಮಸೂದೆ ತರಲಾಗಿದೆ. ಇದನ್ನು ಒಂದು ಆರ್ಡಿನೆನ್ಸ್ ಮುಖಾಂತರ ತಂದಿದ್ದು ಅದು ಕೌನ್ಸಿಲ್‌ನಲ್ಲಿ ಅಂಗೀಕಾರವಾಗಿದೆ ಇಲ್ಲಿಯೂ ಕೂಡ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೆ, ಇಂದು ಮಂಡಿಸಿರತಕ್ಕ ಈ ಕರ್ನಾಟಕ ಗವರ್ನಮೆಂಟ್ ಪಾರ್ಕ್ಸ್ ಪ್ರಿಸರ್ವೇಷನ್ ಅಮೆಂಡ್‌ಮೆಂಟ್ ಬಿಲ್ 1976 ಏನು ಇದೆ ಇದಕ್ಕೆ ಸಂಪೂರ್ಣವಾಗಿ ನನ್ನ ಬೆಂಬಲವನ್ನು ಕೊಟ್ಟು ಇದರ ಬಗ್ಗೆ ಕೆಲವು ಮಾತುಗಳನ್ನಾಡುವುದಕ್ಕೆ ತಮ್ಮ ಅಪ್ಪಣೆ ಪಡೆಯುತ್ತೇನೆ. ಮೊದಲನೆಯದಾಗಿ ಇಲ್ಲಿ ನನಗೆ ಇದರ ಬಗ್ಗೆ ಮಾತನಾಡಲಿಕ್ಕೆ ಅರ್ಹತೆ ಇದೆ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ 1930ರಿಂದ 1947ರವರೆಗೆ ಈ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅನೇಕ ವರ್ಷಗಳ ಕಾಲ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಅಲ್ಲಿ ಆದಂಥ ಆಗುಹೋಗುಗಳನ್ನು ನೋಡಿದ್ದೇನೆ. ಈ ಬೆಂಗಳೂರಿನಲ್ಲಿ ನಾರಿಮನ್ ಗಲಾಟೆಯಲ್ಲಿ ಶೂಟ್ ಮಾಡಿ ಕೊಲೆ ಮಾಡಿದರು ಹಾಗೆ ಶಿವಮೊಗ್ಗ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲಿ, ಬೆಳಗಾಂ ಜಿಲ್ಲೆಯಲ್ಲಿ, ಬಿಜಾಪುರ ಜಿಲ್ಲೆಯಲ್ಲಿ, ಧಾರವಾಡ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಅನೇಕರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ನಮ್ಮ ಕಾರ್ಪೊರೇಷನ್ ಎದುರಿಗೆ ಹಿಂದೆ ಮೊದಲನೆಯ ವರ್ಲ್ಡ್ ವಾರ್ ಆದಾಗ ಅನೇಕರು ಸತ್ತರು ಎಂದು ಒಂದು ದೊಡ್ಡ ಸ್ತಂಭ ನಿಲ್ಲಿಸಿದರು.

ಅದನ್ನು ಕೆಲವು ವರ್ಷಗಳ ನಂತರ ಒಡೆದು ಹಾಕಿದರು. ಆದರೆ, ವೀರಸೌಧ ಆ ರೀತಿಯುದಲ್ಲಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನೇಕ ಧೀರರು ಮತ್ತು ದೇಶಕ್ಕಾಗಿ ಹೆಚ್ಚು ಸೇವೆಯನ್ನು ಸಲ್ಲಿಸಿರತಕ್ಕವರ ನೆನಪಿಗಾಗಿ ಅವರ ಜ್ಞಾಪಕಾರ್ಥ ವೀರಸೌಧ ಎನ್ನುವಂಥ ಒಂದು ಕಟ್ಟಡವನ್ನು ಕಟ್ಟಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ಹೊಸದಾಗಿ ತಿದ್ದುಪಡಿ ತರಬೇಕಾದ ಅಗತ್ಯ ಬಂದಿದ್ದು ನಿಜಕ್ಕೂ ಶ್ಲಾಘನೀಯವಾದ ವಿಚಾರ. ಏಕೆಂದರೆ, ಬೆಂಗಳೂರು ನಗರದಲ್ಲಿರುವ ಪಾರ್ಕ್ ಜಾಗಗಳು ಈಗಾಗಲೇ ಎಷ್ಟೋ ವಿಲೇವಾರಿಯಾಗಿವೆ. ಲಾಲ್‌ಬಾಗಿನಲ್ಲಿ ಒಂದು ಗೋಪುರವಿದೆ ಆ ಗೋಪುರದ ಹತ್ತಿರ ಒಂದು ದೊಡ್ಡ ಬಂಡೆ ಇದೆ. ಆ ಬಂಡೆಯ ಮೇಲೆ ವೀರಸೌಧವನ್ನು ಕಟ್ಟಬೇಕೆಂದು ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದಾರೆ.

5-00 P.M.

ಯಾರವಾಡ ಜೈಲಿನಲ್ಲಿ ಭಗತಸಿಂಗ್ ಮುಂತಾದ ಧೀರರನ್ನು, ದೇಶಕ್ಕಾಗಿ ಅಪಾರವಾಗಿ ತ್ಯಾಗ ಮಾಡಿದಂಥವರನ್ನು ಗಲ್ಲಿಗೆ ಹಾಕತಕ್ಕ ಸಂದರ್ಭದಲ್ಲಿ ನಾವು ಅಲ್ಲಿದ್ದೆವು. ನಾವು ಇದ್ದ ಜಾಗದಿಂದ ಗಲ್ಲಿಗೆ ಹಾಕುವವರನ್ನು ನೋಡತಕ್ಕ ಸಂದರ್ಭ ಇದ್ದಂಥ ಕಾಲದಲ್ಲಿ ನಾವು ಬಹಳ ನೊಂದು 2-3 ದಿವಸ ಊಟ ಮಾಡದೇ ಇದ್ದಂಥ ಸನ್ನಿವೇಶವಿತ್ತು. ಉತ್ತರ ಕನ್ನಡ ಜಿಲ್ಲೆಯ ಅಂಕೋಲ, ಸಿರಸಿ ಮತ್ತು ಸಿದ್ದಾಪುರ ಮೊದಲಾದ ಕಡೆಗಳಲ್ಲಿನ ಅನೇಕ ಜನರು ತಮ್ಮ ಸರ್ವಸ್ವವನ್ನೇ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕಳೆದುಕೊಂಡಿದ್ದಾರೆ; ಕೆಲವರು ಪ್ರಾಣ ನೀಗಿದ್ದಾರೆ; ಅನೇಕ ಜನ ತೊಂದರೆಗೊಳಪಟ್ಟಿದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಸ್ವಾತಂತ್ರ್ಯ ಬಂದು ಇಲ್ಲಿಗೆ 29 ವರ್ಷಗಳಾದರೂ ಈ ರೀತಿಯ ಒಂದು ಸ್ಮಾರಕ ಭವನವನ್ನು ಕಟ್ಟುವ ಬಗ್ಗೆ ಯಾರೂ ಯೋಚನೆ ಮಾಡಿರಲಿಲ್ಲ; ಆದರೆ, ಈಗಲಾದರೂ ಆ ಯೋಚನೆ ಬಂತಲ್ಲ ಎಂದು ನಮಗೆ ಬಹಳ ಸಂತೋಷವಾಗುತ್ತಿದೆ. ಖಂಡಿತವಾಗಿಯೂ ಇಂಥಾ ಒಂದು ಕಾರ್ಯ ಆಗುವುದು ಅಗತ್ಯವಿದೆ; ಇದು ಆಗಲೇ ಬೇಕು. ಎಂದು ನಾನು ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ.

ಇದೇ ಸಂದರ್ಭದಲ್ಲಿ ನಾನು ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡುವುದು ಅವಶ್ಯಕವಿದೆ. ಪಾರ್ಕುಗಳಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶ ಕೊಡಬಾರದು ಎಂದು ಇದ್ದರೂ, ಅನೇಕ ಸಂದರ್ಭಗಳಲ್ಲಿ ಕಬ್ಬನ್ ಪಾರ್ಕಿನಲ್ಲಿ ಅನೇಕ ಜಾಗಗಳನ್ನು ಕೊಟ್ಟಿದ್ದಾರೆ. ಕಬ್ಬನ್ ಪಾರ್ಕಿನಲ್ಲಿ ರಿಜರ್ವ್ ಬ್ಯಾಂಕಿನವರಿಗೆ ಕೊಟ್ಟುಬಿಟ್ಟಿದ್ದಾರೆ, ಬಸಪ್ಪ ಪಾರ್ಕ್ ಒಂದು ಚರಿತ್ರಾರ್ಹವಾದ ಪಾರ್ಕ್: ಈಗ ಅಲ್ಲೂ ಅನೇಕ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ; ಎಂ.ಎನ್. ಕೃಷ್ಣರಾವ್ ಪಾರ್ಕ್‌ನಲ್ಲೂ ಅನೇಕ ಕಟ್ಟಡಗಳು ಬರತ್ತಾ ಇವೆ; ನಗರಾಭಿವೃದ್ಧಿ ಮಂಡಲಿಯವರು ಅನೇಕ ಜಾಗಗಳನ್ನು ಪಾರ್ಕ್‌ಗಳಿಗೆಂದೇ ಬಿಟ್ಟಿದಂಥ ಜಾಗಗಳನ್ನು ರಾಜಕೀಯ ಒತ್ತಡಕ್ಕಾಗಿಯೊ ಅಥವಾ ಬೇರೆ ಒತ್ತಡಗಳಿಗಾಗಿಯೋ ಏನೋ ಕಟ್ಟಡಗಳಿಗೆ ಕೊಡುತ್ತಿದ್ದಾರೆ. ಹೀಗೆ, ರಾಜಾಜಿ ನಗರ ಮತ್ತು ಜಯ-ನಗರದಲ್ಲಿರುವ ಅನೇಕ ಪಾರ್ಕ್‌ಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಕೊಟ್ಟುಬಿಟ್ಟಿದ್ದಾರೆ. ಹೀಗಾದರೆ, ಬೆಂಗಳೂರು ನಗರದ ಸೌಂದರ್ಯ ಹೇಗೆ ಜೆಚ್ಚುತ್ತದೆ? ಒಂದಾನೊಂದು ಕಾಲದಲ್ಲಿ ಬೆಂಗಳೂರು ನಗರದಲ್ಲಿ ಬೇಸಿಗೆ ಕಾಲದಲ್ಲಿ ಹೆಚ್ಚು ಬಿಸಿಲು ಇದ್ದರೂ, ಅದರ ಬೇಗೆ ಅಷ್ಟಾಗಿ ಇರಲಿಲ್ಲ. ಈಗ ಪಾರ್ಕ್‌ಗಳೆಲ್ಲಾ ಹೋಗಿ ಎಲ್ಲೆಲ್ಲ ಕಟ್ಟಡಗಳು ನಿಂತಿರುವುದರಿಂದ, ಬೇಸಿಗೆ ಕಾಲದಲ್ಲಿ ಬಿಸಿಲಿನ ಧಗೆ ತಡೆಯುವುದರಲ್ಲಿ, ವಾಸ ಮಾಡುವುದಕ್ಕೂ ಆಗದ ಕಷ್ಟಪರಿಸ್ಥಿತಿ ಇದೆ. ಹೀಗೆ ಒಂದಾದ ಮೇಲೊಂದರಂತೆ ಪಾರ್ಕುಗಳನ್ನು ನಾಶ ಮಾಡುತ್ತಾ ಹೋದರೆ ಬಹಳ ತೊಂದರೆ ಯಾಗುತ್ತದೆ. ಸರ್ಕಾರದವರು ನಾನಾ ಪ್ರಭಾವಗಳಿಂದ, ನಾನಾ ವಿಧವಾದ ದುರುದ್ದೇಶಗಳಿಂದ ಅನೇಕ ಪಾರ್ಕ್‌ಗಳನ್ನು ನಾಶ ಮಾಡುತ್ತಿದ್ದಾರೆ. ಬೆಂಗಳೂರು ನಗರ ಸಭೆಯ ಅನೇಕ ಕಾರ್ಪೊರೇಟರುಗಳು, ತಾವು ಸ್ಥಾನದಲ್ಲಿರುವಾಗಲೇ ಒಂದು ಶಾಲೆಯಾಗಬೇಕು; ಒಂದು ಮೆಟರ್ನಿಟಿ ಹೋಂ ಆಗಬೇಕು ಎಂದೆಲ್ಲಾ ನೆಪ ಹೇಳಿ, ಅನೇಕ ಪಾರ್ಕ್‌ಗಳನ್ನು ತೆಗೆದುಕೊಂಡು, ಬೆಂಗಳೂರು ನಗರದಲ್ಲಿ ಪಾರ್ಕ್‌ಗಳೇ ಇಲ್ಲದೆ ಹಾಗೆ ಮಾಡುತ್ತಿದ್ದಾರೆ. ಇದು ಬಹಳ ಶೋಚನೀಯವಾದ ವಿಚಾರ. ಮಾನ್ಯ ಮಂತ್ರಿಗಳಾದ ಶ್ರೀ ಶ್ರೀರಾಮುಲು ಅವರಿಗೆ ಈ ವಿಚಾರವಾಗಿ ಬಹಳ ಚೆನ್ನಾಗಿ ಗೊತ್ತಿದೆ. ಭಾಷ್ಯಂ ಪಾರ್ಕ್‌ನ್ನು ಎಷ್ಟು ಕಷ್ಟಪಟ್ಟು ಉಳಿಸಿಕೊಳ್ಳಲಾಯಿತು ಎನ್ನುವುದು ಅವರಿಗೆ ಗೊತ್ತಿದೆ. ಶ್ರೀರಾಮುಲು ಅವರು ಆಗ ಪ್ರಯತ್ನ ಪಡೆದೇ ಇದ್ದಿದ್ದರೆ, ಇವತ್ತಿನ ಭಾಷ್ಯಂ ಪಾರ್ಕ್ ಆಗುತ್ತಾ ಇರಲಿಲ್ಲ.

ಈಗ ಚಿಕ್ಕಲಾಲಬಾಗಿನಲ್ಲೂ ಕೂಡ ಸಣ್ಣ ಸಣ್ಣ ಕಟ್ಟಡಗಳಿಗೆ ಜಾಗಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದುದರಿಂದ, ಸರ್ಕಾರದವರು ಪಾರ್ಕುಗಳಲ್ಲಿ ಕಡ್ಡಾಯವಾಗಿ ಕಟ್ಟಡಗಳನ್ನು ಕಟ್ಟದೇ ಇರುವ ಹಾಗೆ ಒಂದು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇವತ್ತಿನ ದಿವಸ, ಸರ್ಕಾರದವರು, ಲಾಲಬಾಗಿನ ಬಂಡೆಯ ಮೇಲೆ ಕಟ್ಟಬೇಕೆಂದಿರುವ ವೀರಸೌಧ, ಈ ರಾಷ್ಟ್ರಕ್ಕೇ ಒಂದು ನಿಧಿ ಇದ್ದ ಹಾಗೆ. ನಮ್ಮ ರಾಷ್ಟ್ರದ ಸ್ವಾತಂತ್ರಪ್ರಾಪ್ತಿಗಾಗಿ ಹೋರಾಟ ಮಾಡಿ, ಪ್ರಾಣ ನೀಗಿ, ಆಸ್ತಿಪಾಸ್ತಿಗಳನ್ನು ಕಳೆದುಕೊಂಡಂಥ ಮಹಾತ್ಮರ ಸ್ಮರಣಾರ್ಥವಾಗಿ ಒಂದು ಕಟ್ಟಡ ಕಟ್ಟುವುದು ಬಹಳ ಅಗತ್ಯವಾಗಿದೆ. ಹೀಗೆ ಬರೀ ಸ್ಮಾರಕ ಕಟ್ಟಡಗಳನ್ನು

ಕಟ್ಟಿಬಿಟ್ಟರೆ ಸರ್ಕಾರದ ಜವಾಬ್ದಾರಿ ತೀರಿದಂತಲ್ಲ. ಈಗ ಬದುಕಿರುವ ಅನೇಕ ಸ್ವಾತಂತ್ರ್ಯ ಯೋಧರಿಗೆ ವಿಶ್ರಾಂತಿ ವೇತನ ಕೊಡುತ್ತಿದ್ದಾರೆ. ಆದರೆ, ಈಸೂರಿನ ಅನೇಕ ಸಂಸಾರಗಳು ನಾಶವಾಗಿರತಕ್ಕ ಸನ್ನಿವೇಶಗಳಿವೆ. ಅಲ್ಲದೆ, ಸದಾಶಿವರಾವ್ ಅವರೂ ಕೂಡ ಸ್ವಾತಂತ್ರ್ಯಕ್ಕಾಗಿ ಅಪಾರವಾದ ತ್ಯಾಗವನ್ನು ಮಾಡಿದ್ದಾರೆ; ಆದರೆ, ಸದಾಶಿರಾವ್ ಎಂದರೆ, ಅವರು ಯಾರು ಎಂದು ಕೇಳತಕ್ಕ ಪರಿಸ್ಥಿತಿ ಇವತ್ತಿನ ದಿವಸ ಇದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಂಥ ಅನೇಕ ಜನರಿಗೆ ಈಗ ವಿಶ್ರಾಂತಿ ವೇತನ ದೊರೆಯುತ್ತಿದೆ. ಆದರೆ, ಎಷ್ಟೋ ಸಂಸಾರಗಳಿಗೆ ಇನ್ನೂ ಖಂಡಿತವಾಗಿ ನ್ಯಾಯವಾಗಿಲ್ಲ. ಆದುದರಿಂದ, ಹೀಗೆ ಸ್ಮಾರಕ ಭವನ ಕಟ್ಟುವುದರ ಜೊತೆಗೆ, ಅದನ್ನು ಉಳಿಸಿಕೊಂಡು ಹೋಗುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿ, ಮಾನ್ಯ ಸಚಿವರು ತಂದಿರತಕ್ಕ ಮಸೂದೆಯನ್ನು ಸ್ವಾಗತಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ನಂಜಪ್ಪ.—(ಅರಸೀಕೆರೆ) ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನುಮನಧನಗಳನ್ನು ಅರ್ಪಿಸಿ ಪ್ರಾಣಾರ್ಪಣೆ ಮಾಡಿದ ತ್ಯಾಗಶೀಲ ವೀರಯೋಧರ ಜ್ಞಾಪಕಾರ್ಥವಾಗಿ ಒಂದು ವೀರಸೌಧವನ್ನು ಕಟ್ಟಬೇಕೆಂದಿರುವ ವಿಚಾರವನ್ನು ನಾನು ಅತ್ಯಂತ ಸಂತೋಷಕರವಾದ ವಿಷಯವೆಂದು ಭಾವಿಸುತ್ತೇನೆ. 1942ರಲ್ಲಿ ನಡೆದ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿ, ಆಗಿನ ಸರ್ಕಾರದ ಆಜ್ಞೆಗೆ ಒಳಪಟ್ಟು ಈ ಸೂರಿನ ಐದು ಜನ ಸ್ವಾತಂತ್ರ್ಯ ಯೋಧರನ್ನು ಗಲ್ಲಿಗೆ ಹಾಕತಕ್ಕ ಸಂದರ್ಭದಲ್ಲಿ ನಾನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇದ್ದೆ. ಆ ಈಸೂರಿನ ಐದು ಜನ ವೀರಯೋಧರನ್ನು ಗಲ್ಲಿಗೆ ಹಾಕುವುದನ್ನು ಕಣ್ಣಾರೆ ಕಂಡು ನಾನು 2–3 ದಿವಸಗಳವರೆಗೆ ಜೈಲಿನಲ್ಲೇ ಉಪವಾಸವನ್ನು ಆಚರಿಸಿದ್ದೆನು. ನಮ್ಮ ದೇಶದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಅನೇಕ ಜನ ತಮ್ಮ ಪ್ರಾಣಾರ್ಪಣೆ ಮಾಡಿದ್ದಾರೆ; ಭೂಮಿಗಳನ್ನು ಕಳೆದುಕೊಂಡಿದ್ದಾರೆ; ಕೈಕಾಲುಗಳನ್ನು ಕಳೆದುಕೊಂಡಿದ್ದಾರೆ; ಅಲ್ಲದೇ ಜೀವನ ಮಾಡಲಿಕ್ಕೆ ಏನೂ ಇಲ್ಲದೆ ತೊಂದರೆಯನ್ನು ಅನುಭವಿಸತಕ್ಕ ಸಾವಿರಾರು ಜನ ಸ್ವಾತಂತ್ರ್ಯ ಯೋಧರು ನಮ್ಮ ರಾಷ್ಟ್ರದಲ್ಲಿ ಇದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇಂದಿಗೆ 29 ವರ್ಷಗಳಾದರೂ, ಇಲ್ಲಿಯವರೆಗೆ ಸರ್ಕಾರದವರು ಇಂಥಾ ಒಂದು ಮಹತ್ತರ ಕಾರ್ಯದ ಬಗ್ಗೆ ಮನಸ್ಸು ಮಾಡಿರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರನ್ನು ಗೌರವಿಸತಕ್ಕ, ಅವರನ್ನು ನೆನಪಿಸಿಕೊಳ್ಳತಕ್ಕ, ಮುಂದಿನ ಪೀಳಿಗೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯಿತು; ಇಂಥಿಂಥವರು ಸ್ವಾತಂತ್ರ್ಯ ಯೋಧರು ಎನ್ನುವುದನ್ನು ತಿಳಿಯತಕ್ಕದರ ಬಗ್ಗೆ ವೀರಸೌಧ ಕಟ್ಟಡವನ್ನು ನಿರ್ಮಾಣ ಮಾಡಬೇಕೆಂದು ಹೊರಟಿರುವುದು ನಿಜಕ್ಕೂ ಶ್ಲಾಘನೀಯವಾದುದು ಮತ್ತು ಸ್ವಾಗತಾರ್ಹವಾದುದು. ನಾನು ಇದನ್ನು ಅತ್ಯಂತ ಸಂತೋಷದಿಂದ ಸ್ವಾಗತಿಸುವುದಲ್ಲದೆ, ಸರ್ಕಾರಕ್ಕೆ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನೂ ಸಲ್ಲಿಸಬಯಸುತ್ತೇನೆ.

ಆ ಒಂದು ಸ್ವಾತಂತ್ರ್ಯ ಹೋರಾಟ ನಡೆಯದೇ ಇದ್ದರೆ, ಸ್ವಾತಂತ್ರ್ಯ ದೊರೆಯದೇ ಇದ್ದರೆ, ಇವತ್ತು ಪ್ರಜಾಪ್ರಭುತ್ವದಲ್ಲಿ ನಾವು ಇರುವುದಕ್ಕೆ ಆಗುತ್ತಾ ಇರಲಿಲ್ಲ, ಈ ಮಹಾ ಸಭೆ ನಡೆಯುವುದಕ್ಕೂ ಕೂಡ ಅವಕಾಶವಾಗುತ್ತಾ ಇರಲಿಲ್ಲ. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಜ್ಞಾಪಿಸಿಕೊಳ್ಳುವುದು ಬಹಳ ಮುಖ್ಯ. ಜೊತೆಗೆ ನಾನು ಸರ್ಕಾರದಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ಇಂದು ತೊಂದರೆಯಲ್ಲಿರತಕ್ಕವರಿಗೆ ಸಂಭಾವನೆ ಹಾಗೂ ಜಮೀನು ಕೊಡತಕ್ಕ ವ್ಯವಸ್ಥೆ ಮಾಡಲಾಗಿದೆ. ಇಂದೂ ಕೂಡ ಅನೇಕ ಜನ ಇಂಥ ಸೌಲಭ್ಯವನ್ನು ದೊರಕಿಸಿಕೊಳ್ಳದೇ ಕಷ್ಟದಲ್ಲಿದ್ದಾರೆ ಅದಷ್ಟು ಜಾಗ್ರತೆ ಇವರ ಕಷ್ಟವನ್ನು ಬಗೆಹರಿಸುವ ವ್ಯವಸ್ಥೆ ಮಾಡುವುದು ಬಹಳ ಮುಖ್ಯವಾದುದು. ಈ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಕಾರ್ಮಿಕ ಸಚಿವರಾದ ಶ್ರೀರಾಮುಲುರವರಿಗೆ ವಹಿಸಿದೆ. ಶ್ರೀರಾಮುಲುರವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಅಂಥ ಅರ್ಜಿಗಳನ್ನು ತೀರ್ಮಾನ ಮಾಡತಕ್ಕಂಥ ಸಂದರ್ಭದಲ್ಲಿ ಅತ್ಯಂತ ಶೀಘ್ರವಾಗಿ ಪೂರೈಸಬೇಕೆಂದು ನಿವೇದಿಸಿಕೊಳ್ಳುತ್ತೇನೆ. ಕನಿಷ್ಠಪಕ್ಷ ಗ್ರಾಮಾಂತರ ಪ್ರದೇಶಗಳ ಸ್ವಾತಂತ್ರ್ಯ ಹೋರಾಟಗಾರರಿಗೆ ಅತಿ ಜಾಗ್ರತೆ ಸಂದರ್ಶನ ಕೊಟ್ಟು, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ಈ ಮಸೂದೆಗೆ ಸಂಪೂರ್ಣ ಸ್ವಾಗತ ಕೋರಿ, ಆದಷ್ಟು

ಜಾಗ್ರತೆ ವೀರಸೌಧ ನಿರ್ಮಾಣಕ್ಕೆ ಜಾಗ ಕೊಡವುದಲ್ಲದೆ, ಸರ್ಕಾರದಿಂದ 10-15 ಲಕ್ಷ ರೂಪಾಯಿಗಳನ್ನು ಕೊಟ್ಟು, ವ್ಯವಸ್ಥಿತವಾಗಿ ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ನಿವೇದಿಸಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್ (ಮಲ್ಲೇಶ್ವರಂ) —ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಬಗ್ಗೆ ಈಗಾಗಲೇ ನನ್ನ ಸ್ನೇಹಿತರು ಮಾತನಾಡಿ ಬೆಂಬಲ ಸೂಚಿಸಿದ್ದಾರೆ, ನಾನಾದರೂ ಕೂಡ ವೀರ ಸೌಧ ಕಟ್ಟಿಸುವುದಕ್ಕೆ ವಿರೋಧ ವ್ಯಕ್ತಪಡಿಸುವ ಪರಿಸ್ಥಿತಿಯಲ್ಲಿ ಇಲ್ಲ. ವೀರಸೌಧ ಕಟ್ಟಿಸಬೇಕಾದರೆ, ನಮ್ಮ ದೇಶದಲ್ಲಿ ಯಾರು ಯಾರು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದಾರೆ, ಪ್ರಾಣಾರ್ಪಣೆ ಮಾಡಿದ್ದಾರೆ, ತ್ಯಾಗ ಬಲಿದಾನಗಳನ್ನು ಮಾಡಿದ್ದಾರೆ, ಅಂತಹವರ ಸ್ಮರಣೆಯ ಬಗ್ಗೆ ಯೋಚನೆ ಮಾಡುವುದು ಒಳ್ಳೆಯದು. ಇದರ ಬಗ್ಗೆ ಮಾನ್ಯ ಹನುಮಂತಯ್ಯನವರು ಬಹಳ ಕಳಕಳಿಯಿಂದ ಇದ್ದಾರೆ. ಆದರೆ ವೀರಸೌಧವನ್ನು ಯಾವರೀತಿ ಮಾಡುತ್ತಾರೆ ಎನ್ನುವ ವಿವರಗಳು ಗೊತ್ತಿಲ್ಲ, ವಿಷಯ ಇಲ್ಲಿ ಬಂದಿರುವುದರಿಂದ ಇಷ್ಟು ಮಾತ್ರ ಹೇಳಬೇಕಾಗಿದೆ, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟ ಎಂದರೆ, ಸಾಮ್ರಾಜ್ಯಷಾಹಿ ವಿರುದ್ಧ ಹೋರಾಟ. 1857ನೇ ಇಸವಿಯಿಂದ 1947 ನೇ ಇಸವಿಯ ವರೆಗೆ ನಡೆದಂತ ಹೋರಾಟವೇ ನಮ್ಮ ಚರಿತ್ರೆ, ಆಗ ಅದನ್ನು ಸಿಪಾಯಿದಂಗೆ ಎಂದು ಕರೆದರು. ಅಲ್ಲಿಂದ ಮೊದಲನೆ ಸ್ವಾತಂತ್ರ್ಯ ಯುದ್ಧ, ಈ ರೀತಿಯಾಗಿ ಅನೇಕ ಸ್ವಾತಂತ್ರ್ಯ ಸಂಗ್ರಾಮಗಳು ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿದ್ದಾರೆ. ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ನಡೆದಂತ ''ಉಪ್ಪಿನ ಸತ್ಯಾಗ್ರಹ'' ಮುಂತಾದ ಚಳುವಳಿಗಳು, ಬಾಲಗಂಗಾಧರ ತಿಲಕ್‌ರವರ ನೇತೃತ್ವದಲ್ಲಿ ನಡೆದಂತ ಚಳುವಳಿಗೆ ಬೊಂಬಾಯಿನ ಕಾರ್ಮಿಕ ವರ್ಗ ಮುಷ್ಕರ ನಡೆಸಿತು, ಇದಕ್ಕೆ ವಿಶ್ವಾದ್ಯಂತ ಮನ್ನಣೆ ಕೊಟ್ಟರು, ಬ್ರಿಟೀಷ್ ಸಾಮ್ರಾಜ್ಯಷಾಹಿ ಜೊತೆ ಸಂಪರ್ಕ ಇಟ್ಟುಕೊಳ್ಳಬಾರದು ಎಂದು ತಿಲಕ್ ರವರು ಘೋಷಣೆ ಮಾಡಿದರು. ವೀರ ಭಗತಿಸಿಂಗ್ ಮುಂತಾದವರು ಈ ಸಮಯದಲ್ಲಿ ಜ್ಞಾಪಕಕ್ಕೆ ಬರುತ್ತಾರೆ. ಇದೆಲ್ಲವನ್ನೂ ವೀರಸೌಧದಲ್ಲಿ ಚಿತ್ರಿಸಬೇಕು. ಚಿತ್ರ ಪಟದ ರೀತಿ, ವಸ್ತು ಪ್ರದರ್ಶನದ ರೀತಿ ಇರಬೇಕು. ಐ.ಎನ್.ಎ. ಬಗ್ಗೆ ಎಷ್ಟು ಜನಕ್ಕೆ ಗೊತ್ತಿದೆ ? 1946ರಲ್ಲಿ ನಡೆದಂತ ಪ್ರಚಂಡ ಹೋರಾಟ ಎಷ್ಟು ಜನಕ್ಕೆ ಗೊತ್ತಿದೆ ? ಎಷ್ಟೋ ಜನಕ್ಕೆ ಇವು ಗೊತ್ತಿಲ್ಲ, ವೀರಸೌಧ ಕಟ್ಟಿಸುತ್ತೇವೆಂದು ದೊಡ್ಡದಾಗಿ ಒಂದು ಬಿಲ್ಡಿಂಗ್ ಕಟ್ಟಿದರೆ ಸಾಲದು. ಸ್ವಾತಂತ್ರ್ಯಕ್ಕಾಗಿ ನಡೆದಂತ ಎಲ್ಲ ಘಟನೆಗಳನ್ನು ಅದರಲ್ಲಿ ಅಳವಡಿಸಬೇಕು. ಇದರಿಂದ ನಮ್ಮ ಮುಂದಿನ ಪೀಳಿಗೆ ಹಿಂದೆ ಸ್ವಾತಂತ್ರ ಕ್ಕಾಗಿ ಯಾವರೀತಿಯ ಹೋರಾಟಗಳು ನಡೆದಿವೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಸ್ವಾತಂತ್ರ್ಯ ಹೋರಾಟದ ಬಗ್ಗೆ ಅನೇಕ ಪುಸ್ತಕಗಳು ಇವೆ, ಬೇಕಾದಷ್ಟು ಚರಿತ್ರೆ ಇದೆ, ಅದನ್ನು ಒದಗಿಸಬೇಕು. ಆ ದೃಷ್ಟಿಯಿಂದ ವೀರಸೌಧವನ್ನು ಕಟ್ಟಿಸಬೇಕಾದುದು ಅತಿ ಮುಖ್ಯವಾದುದು.

ಮಾನ್ಯ ಅಧ್ಯಕ್ಷರೇ, ಮುಖ್ಯವಾದ ಪ್ರಶ್ನೆ ಏನು ಎಂದರೆ, ವೀರಸೌಧವನ್ನು ಲಾಲ್‌ಬಾಗಿನ ಪ್ರಖ್ಯಾತ ಬಂಡೆಯ ಮೇಲೆ ಕಟ್ಟಿಸಬೇಕೆಂದು ಇದ್ದಾರೆ, ಪ್ರಪಂಚದಲ್ಲಿರತಕ್ಕಂಥ ಉತ್ಕೃಷ್ಟವಾದ ಬಂಡೆಗಳು ಮೂರು ಕಡೆ ಇದ್ದು, ಅದು ಕರ್ನಾಟಕ ರಾಜಧಾನಿ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಒಂದು ಇದೆ, ಭೂಗರ್ಭ ಇಲಾಖೆಯವರ ಅಭಿಪ್ರಾಯದಂತೆ ಇದು ಬಹಳ ಉತ್ಕೃಷ್ಟವಾದ ಬಂಡೆ ಎಂದು ಹೇಳಿದ್ದಾರೆ, ಇದನ್ನು ಉಳಿಸಿಕೊಂಡು ಬರತಕ್ಕದ್ದು ಸರ್ಕಾರದ ಕರ್ತವ್ಯ. ಈ ಬಂಡೆಯನ್ನು ಒಡೆದು ಅದರ ಮೇಲೆ ವೀರಸೌಧ ಕಟ್ಟಿದರೆ ಅದಕ್ಕೆ ಇರತಕ್ಕಂಥ ಪ್ರಾಶಸ್ತ್ಯ ಕಡಿಮೆಯಾಗುತ್ತದೆ; ಅದರ ಪಕ್ಕದಲ್ಲಿಯೇ ಕಟ್ಟಿಸಿ ಅದಕ್ಕೆ ನನ್ನ ವಿರೋಧ ವಿಲ್ಲ. ಮತ್ತೊಂದು ವಿಚಾರ ಏನು ಎಂದರೆ ವೀರಸೌಧವನ್ನು ಕಟ್ಟುವುದಕ್ಕೆ ಲಾಲ್‌ಬಾಗಿನ ಒಳಗೆ ಅವಕಾಶ ಕೊಟ್ಟಿರುವುದು. ಇದೇರೀತಿ ಎಲ್ಲಾ ಕ್ಕೂ ಕೊಡುತ್ತಾ ಬಂದರೆ, ನಾಳೆ ದಿವಸ ಕಾಂಗ್ರೆಸ್ಸಿನವರು ನಮ್ಮ ಭವನ ಕಟ್ಟಿಸುವುದಕ್ಕೆ ನಮಗೂ ಕಬ್ಬನ್ ಪಾರ್ಕಿನಲ್ಲಿಯೋ, ಅಥವಾ ಇನ್ನಾವುದೋ ಪಾರ್ಕಿನಲ್ಲಿಯೋ ಕೊಡಿ ಎಂದರೆ ಬಹಳ ಕಷ್ಟವಾಗುತ್ತದೆ. ತಾವು ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು, ಈಗಾಗಲೇ ಅನೇಕ ಪಾರ್ಕುಗಳಲ್ಲಿ ಬೇರೆಯವರಿಗೆ ಕೊಟ್ಟಿರತಕ್ಕ ನಿದರ್ಶನಗಳನ್ನು ಮೊನ್ನೆ ನಾನು ಬೆಂಗಳೂರು ಪ್ರಾಧಿಕಾರದ ಬಗ್ಗೆ ಮಾತನಾಡುವಾಗ ಹೇಳಿದ್ದೇನೆ. ಚೌಡಯ್ಯ ಮೆಮೋರಿಯಲ್ ಬಿಲ್ಡಿಂಗ್ ಇನ್ನೂ ಬರಲೇ ಇಲ್ಲ; ಇಂಥ ವಿಚಾರದಲ್ಲಿ ತಾವು ಎಚ್ಚರಿಕೆಯಿಂದ ಇರಬೇಕೆಂದು ಹೇಳಿದ್ದೇನೆ. ತಾವು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

† ಶ್ರೀ ಬಿ. ಪುಟ್ಟಸ್ವಾಮಯ್ಯ.—(ರಾಮನಗರಂ) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಂದಿರತಕ್ಕಂಥಾ ಈ ತಿದ್ದುಪಡಿ ಮಸೂದೆಯನ್ನು ನಾನು ಆತ್ಮವಿಶ್ವಾಸದಿಂದ ಸ್ವಾಗತಿಸುತ್ತಾ ಆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಾವುಗಳು ಸ್ವಾತಂತ್ರ್ಯ ಹೋರಾಟಗಾರರಾಗಿ ಇಲ್ಲಿಗೆ ಬಂದಂಥ ಜನ. ಸ್ವಾತಂತ್ರ್ಯ ಪೂರ್ವದಲ್ಲ ಈ ಭಾರತದಲ್ಲಿ ಜನಗಳ ರಕ್ತದಲ್ಲಿ ಹೇಗಿತ್ತು ಎಂದರೆ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯಕ್ಕಾಗಿ ಕರೆ ಕೊಟ್ಟಾಗ ತಮ್ಮಷ್ಟಕ್ಕೆ ತಾವೇ ಬಂದರು. ಚಿಕ್ಕ ಮಗುವಿನಿಂದ ಹಿಡಿದು ಮುದುಕನವರೆಗೂ ಕೂಡ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತರಬೇಕು ಅನ್ನುವ ಆಸೆಯಿಂದ ಅವರೆಲ್ಲಾ ಮುಂದಾಗಿ ಬಂದರು. ಈರೀತಿಯಾಗಿ ನಮ್ಮ ದೇಶದ ಜನ ಹೋರಾಡಿ ಸ್ವಾತಂತ್ರ್ಯವನ್ನು ತಂದು ಕೊಟ್ಟಂಥಾ ವ್ಯಕ್ತಿಗಳನ್ನು ಮುಕ್ತ ಕಂಠದಿಂದ ಹೊಗಳುವುದೇ ಅಲ್ಲ ಅವರ ಮೇಲ್ಮನೆಯ ಜೀವನವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬೆಳೆಸುವುದು ಒಳ್ಳೆಯದು ಎಂದು ಹೇಳುತ್ತೇನೆ. ಆ ವ್ಯಕ್ತಿಗಳು ಹಿಂದೆ ಮಾಡಿದಂಥಾ ತ್ಯಾಗದ ಬಲಿದಾನದಿಂದ ನಾವು ಸ್ವತಂತ್ರ ವ್ಯಕ್ತಿಗಳಾಗಿ ಬಾಳುತ್ತಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಬೋಧೆ ಹೀಗೆ ಇತ್ತು. ಈ ದಿವಸ ವೀರ ಸೌಧವನ್ನು ಕಟ್ಟತಕ್ಕಂಥ ಶ್ರೀಮಾನ್ ಕೆ. ಹನುಮಂತಯ್ಯನವರು ಏನು ಇದ್ದಾರೆ ಅವರು ಒಂದು ಸಾರಿ ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು ಏನೆಂದರೆ ಮೈಸೂರು ರಾಜ್ಯದಲ್ಲಿ ರಾಜ ಅನ್ನುವುದು ಹೋಗಬೇಕು ಅದಕ್ಕೆ ನಾವು ವಿರೋಧಿಸಬೇಕು ಎಂದು ಅಷ್ಟಕ್ಕೆ ಅವರಿಗೆ ಬಹಳ ದಿವಸ ಸೆರೆವಾಸ ಆಯಿತು. ಆವಾಗ ಲಕ್ಷೋಪಲಕ್ಷ ಜನ ನಮ್ಮ ಸ್ವಾತಂತ್ರ್ಯಕ್ಕೆ ತಮ್ಮ ಪ್ರಾಣವನ್ನೇ ಕೊಟ್ಟರು. ಅವರ ಆಚಾರ ಭಾವನೆಗಳಿಂದ ನಾವು ಈಗ ನಡೆಯುತ್ತಿದ್ದೇವೆ. ಹಿಂದೆ ಶಿವಪುರ ಕಾಂಗ್ರೆಸ್‌ನಲ್ಲಿ ಕೆಲಸ ಮಾಡಿರತಕ್ಕಂಥಾವರು ಹುಡುಗರೇ. ನಾನು ಹೈಸ್ಕೂಲಿನಲ್ಲಿ ಓದುತ್ತಾ ಇದ್ದೆ. ಶ್ರೀಮಾನ್ ಟಿ. ಸಿದ್ದಲಿಂಗಯ್ಯನವರು ಮೊದಲನೇ ಕಾಂಗ್ರೆಸ್‌ನ ಅಧ್ಯಕ್ಷರು. ಸ್ವಾತಂತ್ರ್ಯ ಬಂದಾಗ ನಮ್ಮ ಆತ್ಮವಿಶ್ವಾಸವನ್ನೇ ವಿಮರ್ಶೆಮಾಡುವುದಾದರೆ ಈ ವೀರಸೌಧ ಏತಕ್ಕೆ ಕಟ್ಟಿಸಬೇಕು ಅನ್ನುವುದು ಗೊತ್ತಾಗುತ್ತದೆ. ಶ್ರೀಮಾನ್ ಎಂ.ಎಸ್. ಕೃಷ್ಣನ್ ಅವರು ಕೇಳಿದರು ಅಲ್ಲಿ ಏನು ಇರುತ್ತದೆ, ಆ ಕಟ್ಟಡ ಹೇಗೆ ಇರುತ್ತದೆ ಅದರಲ್ಲಿ ಏನೇನು ವ್ಯವಸ್ಥೆ ಇರುತ್ತದೆ, ಆ ವೀರಸೌಧದ ಒಳಗೆ ಬಂದಂಥ ವ್ಯಕ್ತಿಗಳಿಗೆ ಅವರ ಹೃದಯದಲ್ಲಿ ಏನಾಗುತ್ತದೆ, ಅಲ್ಲಿಂದ ಹೊರಗೆ ಬಂದರೆ ಅವರ ಹೃದಯದಲ್ಲಿ ಏನಾಗುತ್ತದೆ ಅನ್ನುವ ವಿಷಯಗಳನ್ನು ಈ ಸಭೆಯ ಮುಂದೆ ಇಟ್ಟರು. ಅದು ಬಹಳ ಸೂಕ್ತವಾಗಿದೆ. ನಾನು ಈ ಬಗ್ಗೆ ಒಂದು ಮಾತು ಹೇಳುತ್ತೇನೆ. ಈ ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥಾ ನಾವುಗಳು ಏನು ಇದ್ದೇವೆ ಪ್ರಾಮಾಣಿಕರಾದಂಥಾವರ ಬಗ್ಗೆ ಹೇಳುವುದಾದರೆ ಅವರ ಆತ್ಮ ವಿಶ್ವಾಸದಿಂದ ಆಚಾರ ವಿಚಾರ ಮನೋಭಾವದಿಂದ ಏನು ಕೆಲಸ ಮಾಡುತ್ತಾರೆ ಯಾವಶಾಸಕರೇ ಆಗಲೀ, ಯಾವ ಮಂತ್ರಿಯೇ ಆಗಲಿ ಅವರು ದೇಶಕ್ಕೆ ಏನು ಸೇವೆ ಮಾಡಿದ್ದಾರೆ, ಅವರು ದೇಶಕ್ಕೆ ಎಷ್ಟು ದುಡಿದಿದ್ದಾರೆ ಅನ್ನುವುದನ್ನು ಹೇಳಲಿ. ಯಾರೇ ಆಗಲಿ ನನ್ನ ಹೆಂಡತಿ ಮಕ್ಕಳು ಈ ಸಮಾಜದಲ್ಲಿ ಚೆನ್ನಾಗಿರಬೇಕು ಎಂದು ಹೇಳುತ್ತಾರೇ ವಿನಾ ಈ ಸ್ವಾತಂತ್ರ್ಯ ಹೋರಾಟಗಾರರು ಮಾಡಿರತಕ್ಕಂಥಾ ಸೇವೆಯನ್ನು ಯಾರು ಸ್ಮರಿಸಿಕೊಳ್ಳುತ್ತಾರೆ ಅನ್ನುವುದನ್ನು ಅವರು ಆತ್ಮವಿಶ್ವಾಸ ಇಟ್ಟು ಹೇಳಲಿ. ಹಿಂದೆ ನಮ್ಮ ಶ್ರೀಮಾನ್ ಚೆನ್ನಯ್ಯನವರು ಹೇಳುತ್ತಾ ಇದ್ದರು ನಾವೂ ನೀವು ಎಲ್ಲರೂ ಕೂಡ ಈ ದೇಶದಲ್ಲಿ ಒಂದು ಮಾದರಿಯಾದ ಜೀವನ ನಡೆಸಬೇಕು ಎಂದು ಅಂಥಾ ಒಬ್ಬ ಸೃಷ್ಟಿಕರ್ತ ಈವೊತ್ತು ಎಲ್ಲಿ ಬರುತ್ತಾನೆ. ಯಾರಾದರೂ ವೀರಸೌಧ ಕಟ್ಟಡಕ್ಕೆ ಹೋಗಿ ನೋಡಿಕೊಂಡು ಬಂದಂಥಾವರಿಗೆ ಅದು ಒಂದು ಬೋಧಕಸೌಧವಾಗಿರಲಿ ಎಂದು ನಾನು ಹೇಳುತ್ತೇನೆ. ಕೃಷ್ಣನ ಕಾಲದ ಒಂದು ಹಳೆಯ ಕಹಳೆ ಈ ಕಟ್ಟಡ ನೋಡಿದರೆ ಜ್ಞಾಪಕಕ್ಕೆ ಬರಬೇಕು. ಇದು ಮುಂದಿನ ಪೀಳಿಗೆಯ ಮಕ್ಕಳಿಗೆ ಮಾರ್ಗದರ್ಶನವಾಗಿರಬೇಕು. ಅಂಥಾ ಒಂದು ಭವ್ಯ ಕಟ್ಟಡ ಇದು ಆಗಬೇಕು ಎಂದು ಹೇಳುತ್ತೇನೆ. ಮತ್ತು ನನ್ನ ಸ್ನೇಹಿತರು ಹೇಳಿದರು ಇದಕ್ಕೆ 10—15 ಲಕ್ಷ ರೂಪಾಯಿ ಸರ್ಕಾರ ಹಾಕಿ ಕಟ್ಟಡ ಕಟ್ಟಬೇಕು ಎಂದು ಅದನ್ನು ನಾನು ಒಪ್ಪುವುದಿಲ್ಲ. ಕೆಲವು ಕೋಟಿಯನ್ನಾದರೂ ಕೂಡ ಸಂಗ್ರಹಿಸುವುದಕ್ಕೆ ಮಾನ್ಯ ಸಚಿವರು ನಿಂತು ಕೊಂಡು ಭಿಕ್ಷಯನ್ನಾದರೂ ಬೇಡಿ ಈ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಕೋಟಿ ಕೋಟಿಗಟ್ಟಲೆ ಹಣ ಬೇಕು. ಅಂಥಾ ಒಂದು ಭವ್ಯಸೌಧ ಕಟ್ಟಡ ಆಗಬೇಕು, ಅಲ್ಲದೆ ತ್ಯಾಗ ಮಾಡಿ ಸ್ವಾತಂತ್ರ್ಯ ಗಳಿಸಿದವರ ನೆನಪಿಗಾಗಿ ಇಂಥಾ ಒಂದು ಸ್ಮಾರಕ ಕಟ್ಟುವುದು ಅಗತ್ಯ.

ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಇಂಥಾ ಒಂದು ಭವ್ಯವಾದಂಥ ಮಾದರಿ ಕಟ್ಟಡ ನಮ್ಮ ದೇಶದಲ್ಲಿ ಆಗಲಿ ಎಂದು ನಾನು ಮನವಿಯನ್ನು ಸಲ್ಲಿಸುತ್ತೇವೆ. ಈ ದೃಷ್ಟಿಯಿಂದ ಮಾನ್ಯ ಸಚಿವರು ತಂದಿರತಕ್ಕಂಥಾ ಈ ಮಸೂದೆಗೆ ಸ್ವಾಗತ ಕೋರುವುದಲ್ಲದೆ ಅವರು ಈ ಸಭೆಗೆ ತಿಳಿಸಬೇಕು ನಾವು ರಾಜ್ಯದ ಜನತೆಗೆ ಏನು ಮಾಡುತ್ತೇವೆ ಎನ್ನುವುದನ್ನು ತಿಳಿಸಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ.—(ತೀರ್ಥಹಳ್ಳಿ) ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಲಾಲ್‌ಬಾಗ್‌ನಲ್ಲಿ ವೀರಸೌಧದ ನಿರ್ಮಾಣಕ್ಕೋಸ್ಕರವಾಗಿ ಈಗ ಏನು ಒಂದು ತಿದ್ದುಪಡಿಯನ್ನು ಮಾನ್ಯ ಸಚಿವರು ಮಂಡಿಸಿದ್ದಾರೋ ಅದಕ್ಕೆ ನಾನು ಸ್ವಾಗತವನ್ನು ಬಯಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಮೊದಲನೆಯದಾಗಿ ಈ ವೀರಸೌಧದ ಸೃಷ್ಟಿಕರ್ತರಾದಂಥಾ ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಕೆ. ಹನುಮಂತಯ್ಯನವರಿಗೂ ಮತ್ತು ನಮಗೂ ಅವರ ಸೇವೆ ಬಗ್ಗೆ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ಮಾಡಿದವರ ಸೇವೆ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಈ ವೀರಸೌಧದಲ್ಲಿ ಈವಾಗ ಏನಾಗಿದೆ ಎಂದರೆ ಹೊರಗಡೆಯಲ್ಲಿ ಕೆಲವು ಸೌಧಗಳು ನಿರ್ಮಾಣವಾಗುತ್ತಿವೆ ಇನ್ನು ಕೆಲವು ಸೌಧಗಳು ಪಾತಾಳದಲ್ಲಿ ಹುದುಗಿಡಲ್ಪಟ್ಟಿವೆ. ಈ ಸ್ವಾತಂತ್ರ್ಯದ ಚಳುವಳಿಯಲ್ಲಿ ಮರಣಹೊಂದಿ ಮಹಾಸಾಧನೆಗಳನ್ನು ಸಾಧಿಸಿದಂಥಾ ಕೆಲವರ ಇತಿಹಾಸಗಳು ನೋಡಿದರೆ ಕೆಲವರದ್ದು ಭೂಮಿ ಮೇಲುಗಡೆ ಬರುತ್ತದೆ ಕೆಲವರದ್ದು ಭೂಮಿ ಒಳಗಡೆ ಪಾತಾಳಕ್ಕೆ ಹೋಗಿದೆ. ಇಂಥಾ ಪಾತಾಳಕ್ಕೆ ಹೋಗಿರುವ ಇತಿಹಾಸಗಳು ಈಗ ಮೇಲುಗಡೆ ಬರಬೇಕು. ಈರೀತಿಯಾಗಿ ಇದರಲ್ಲಿ ಎರಡು ವರ್ಗಗಳು ಇರುವುದರಿಂದ ಇದರಲ್ಲಿ ಒಂದು ವಿಚಾರವನ್ನು ನಾನು ನಿವೇದಿಸಿಕೊಳ್ಳಬೇಕಾಗಿದೆ. ಈ ವೀರಸೌಧದಲ್ಲಿ 1947ರ ಆಗಸ್ಟ್ 15ರ ಹಿಂದೆ ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಯಾರ್ಯಾರು ಸೇವೆ ಮಾಡಿದ್ದರೋ ಅವರ ಇತಿಹಾಸವನ್ನು ಬರೆಯುವುದಾದರೆ ಒಳ್ಳೆಯದು ಅದು ಬಿಟ್ಟು 1947-48ರ ಈಚಿನವರ ಇತಿಹಾಸವನ್ನೂ ಕೂಡ ಬರೆಯುವುದಾದರೆ ಅದು ವ್ಯಥೆಯಾಗುವುದಲ್ಲದೆ ಅದು ಒಂದು ಕಥೆಯ ಸೌಧವಾಗುತ್ತದೆ ಅಥವಾ ಬೇರೆ ಯಾವುದಾದರೂ ಒಂದು ಸೌಧ ಅಂಥಾ ಹೇಳುವ ಸಂದರ್ಭ ಬರುತ್ತದೆ. ಈ ವೀರ ಸೌಧ ಹಿನ್ನೆಲೆ ಏನು ಇದೆ ಇವಕ್ಕೆ ಜಾಗ ಕೊಡುವುದು ಏನು ಇವೆ ಇದರಲ್ಲಿ 1947-48 ರ ಹಿಂದಿನವರು ಈ ದೇಶಕ್ಕೆ ಏನು ತ್ಯಾಗ ಮಾಡಿದ್ದಾರೆ, ಅವರು ಈ ದೇಶಕ್ಕೆ ಏನು ದುಡಿದಿದ್ದಾರೆ ಅಂಥಾವರ ಹೆಸರುಗಳನ್ನು ಅವರ ಇತಿಹಾಸವನ್ನು ಅಲ್ಲಿ ಬರೆಯಬೇಕು ವಿನಾ 1947—48 ರ ಈಚಿನವರ ಇತಿಹಾಸ ಅದರಲ್ಲಿ ಬರೆದರೆ ಅದು ಒಂದು ಮಂದಿರ ತರಹ ಆಗಿಬಿಡುತ್ತದೆ. ಆಮೇಲೆ ಅದನ್ನು ಗಾಂಧಿ ಮಂದಿರ ಅಂತಲೋ ಇಂದಿರಾ ಮಂದಿರ ಅಂತಲೋ ಅಥವಾ ಅರಸು ಮಂದಿರ ಅಂತಲೋ ಆಗಿಬಿಡುತ್ತದೆ. ಆರೀತಿ ಮಾಡಬಾರದು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಾವು ಹೇಳುವುದು ಈ ಕಕ್ಷೆಯಲ್ಲಿ ಬರುವುದಿಲ್ಲ,

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ ನಾನು ಹೇಳಿದ ಉದ್ದೇಶ ಸ್ವಾತಂತ್ರ್ಯ ಚಳುವಳಿಯಲ್ಲಿ ಸೇವೆ ಮಾಡಿದಂಥಾ ಹೋರಾಟಗಾರರ ಒಂದು ಸೌಧ ಆಗಬೇಕೇ ವಿನಾ ಹಾರಾಟಗಾರರ ಸೌಧ ಆಗಬಾರದು ಅಂತ. ಈ ಲಾಲ್‌ಬಾಗನಲ್ಲಿ ಯಾವ ಒಂದು ಉದ್ದೇಶಕ್ಕೆ ಜಾಗ ಕೊಟ್ಟಿದ್ದೀರೋ ಅದು ಕೇವಲ ಮಂದಿರಗಳಾಗದೆ ಒಂದು ಭವ್ಯವಾದಂಥ, ಒಂದು ಸುಂದರವಾದಂಥ ಕಟ್ಟಡ ಆಗಬೇಕು ಅನ್ನುವ ಒಂದು ಉದ್ದೇಶದಿಂದ ಹೇಳುತ್ತಿದ್ದೇನೆ. ಇಲ್ಲದೇ ಹೋದರೆ ಅದು ಈ ಪಕ್ಷಿಗಳಿಗೆ ಮತ್ತು ಇತರ ಪ್ರಾಣಿಗಳಿಗೆ ಒಂದು ನಿವಾಸಕ್ಕೆ ಅನುಕೂಲವಾಗಿರಬೇಕು. ಈ ದೃಷ್ಟಿಯಿಂದ ನಾನು ಹೇಳುವುದು ಈ ಜಾಗ ಬರೀ ಒಂದು ವೀರಸೌಧಕ್ಕೆ ಸೀಮಿತವಾಗಿರಬೇಕೇ ವಿನಾ ಮತ್ತೆ ಯಾವುದೇ ರೀತಿಯಲ್ಲಿ ಅದು ಆಗಬಾರದು ಅಂತ ಅಷ್ಟು ಹೇಳಿ ಈ ಜಾಗವನ್ನು ವೀರಸೌಧ ಕಟ್ಟಡಕ್ಕೆ ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P. M.

† ಶ್ರೀ ಕೆ. ಟಿ. ರಾಥೋಡ್.— ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಭೆಯ ಮುಂದೆ ಇಟ್ಟಿರುವ ಈ ತಿದ್ದುಪಡಿ ಮಸೂದೆ ಬಹಳ ಒಳ್ಳೆಯದಾಗಿದೆಯೆಂದು ಹೇಳುತ್ತೇನೆ. ಅದಕ್ಕಾಗಿಯೇ ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದಕ್ಕೋಸ್ಕರ ಅವರಿಗೆ ಪ್ರಥಮವಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡುವಾಗ ಕೆಲವು ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಪ್ರಥಮವಾಗಿ ನಾನು ಮಾನ್ಯ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಈ ತಿದ್ದುಪಡಿ ವಿಧೇಯಕವನ್ನು ತಂದದ್ದು, ಕೇವಲ ಈಗ ಇರುವಂತಹ ಕಾನೂನಿನ ಪ್ರಕಾರ ಸರ್ಕಾರದವರು ಆ ಜಾಗವನ್ನು ಬಿಡುಗಡೆ ಮಾಡಲು ಒಂದು ಅಧಿಕಾರವನ್ನು ಪಡೆಯುವುದಕ್ಕಾಗಿ ; ವೀರಸೌಧ ಟ್ರಸ್ಟಿನವರು ತಮಗೆ ವೀರಸೌಧ ಕಟ್ಟಿಸಲು ಸ್ವಲ್ಪ ಜಾಗ ಬೇಕಾಗಿದೆ. ಆದಕಾರಣ ಲಾಲ್‌ಬಾಗ್ ನಲ್ಲಿ ಸ್ವಲ್ಪ ಜಾಗ ಕೊಡಬೇಕೆಂದು ಕೇಳಿದರು ; ಈಗ ನಮ್ಮ ಲಾಲ್‌ಬಾಗ್ ಕ್ಷೇತ್ರದ ಒಂದು ಪೂರ್ತಾ ವ್ಯಾಪಕತೆ 240 ಎಕರೆಗಳಷ್ಟಿದೆ ; ಅದರಲ್ಲಿ 6 ಎಕರೆ ಜಾಗವನ್ನು ಮಾತ್ರ ಅವರು ಕೇಳಿದ್ದಾರೆ. ಅದರ ಜೊತೆಗೆ ಇನ್ನೂ 22 ಎಕರೆ ಜಮೀನನ್ನು ನಾವು ಕೊಡಬೇಕೆಂದಿರುವ ಜಾಗದ ಪಕ್ಕದಲ್ಲಿಯೇ ಅಕ್ವೈರ್ ಮಾಡುತ್ತಿದ್ದಾರೆ. ಅಂದರೆ ಒಟ್ಟು 28 ಎಕರೆ ಜಾಗದಲ್ಲಿ ಈ ವೀರಸೌಧ ಬರುತ್ತದೆ. ಅದನ್ನು ಅಲ್ಲಿ ಯಾವ ರೀತಿ ಕಟ್ಟುತ್ತಾರೆಂಬುದು ಆ ಟ್ರಸ್ಟಿನವರಿಗೆ ಮಾತ್ರ ಗೊತ್ತು ನಮಗೇನೂ ಗೊತ್ತಿಲ್ಲ ; ಈಗ ಅವರು ನಮ್ಮನ್ನು ಕೇವಲ ಜಾಗ ಕೇಳಿದ್ದಾರೆ. ಅದಕ್ಕಾಗಿ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದರ ಬಗ್ಗೆ ಮಾತನಾಡುವಾಗ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಮಾನ್ಯ ಶಾಮಣ್ಣನವರು ಮಾತನಾಡುವಾಗ ಕಬ್ಬನ್ ಪಾರ್ಕ್‌ಗೆ ಸೇರಿದ ಜಾಗ ಸಿ.ಐ.ಟಿ.ಬಿ.ಗೆ ಸೇರಿದ ಜಾಗ, ರಾಜಾಜಿನಗರದಲ್ಲಿರುವ ಪಾರ್ಕಿನ ಜಾಗ ಪರಭಾರೆಯಾಗಿದೆ ; ಇದರಿಂದ ನಮ್ಮ ಬೆಂಗಳೂರು ನಗರದ ಸೌಂದರ್ಯ ಕೆಡುತ್ತಿದೆ ಎಂದು ಹೇಳಿದರು; ಅವರ ಅಭಿಪ್ರಾಯದಲ್ಲಿ ಸತ್ಯಾಂಶವಿದೆ. ಆದರೆ ಇವೊತ್ತು ತಂದಿರತಕ್ಕಂಥ ತಿದ್ದುಪಡಿ ಮಸೂದೆ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟದ್ದಾಗಿದೆ; ಆದಕಾರಣ ಮಾನ್ಯ ಸದಸ್ಯರು ಹೇಳಿದ ಕೆಲವು ಪಾರ್ಕ್‌ಗಳು ನಮ್ಮ ಇಲಾಖೆಗೆ ಸಂಬಂಧಪಡುವುದಿಲ್ಲ; ಆದರೂ ಸಹ ಅವರು ಮಾಡಿದ ಸಲಹೆಗಳನ್ನು ಸರ್ಕಾರ ಗಮನದಲ್ಲಿಡುತ್ತದೆ. ಮತ್ತು ಇನ್ನು ಮುಂದೆ ಅಂತಹ ವಿಲೇವಾರಿ ಆಗದಂತೆ ನೋಡಿಕೊಳ್ಳಲಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಸುಭಾಷ್‌ನಗರದಲ್ಲಿರುವ ಜಾಗ ಯಾರಿಗೆ ಸೇರಿದ್ದು?

ಶ್ರೀ ಕೆ. ಟಿ. ರಾಥೋಡ್.— ಅದು ನಮ್ಮ ಇಲಾಖೆಗೆ ಸೇರಿದ್ದು;

ಶ್ರೀ ಕಾಗೋಡು ತಿಮ್ಮಪ್ಪ.— ಆ ಜಾಗವನ್ನು ಬೇರೆಯವರಿಗೆ ಏತಕ್ಕೆ ಕೊಡುತ್ತಿದ್ದೀರಿ?

ಶ್ರೀ ಕೆ.ಟಿ. ರಾಥೋಡ್.— ಇಂದು ಮಾತ್ರ ಕೊಡುತ್ತಿಲ್ಲ; ಅಲ್ಲಿ ವಸ್ತು ಪ್ರದರ್ಶನವನ್ನು ನಡೆಸಲು ಮೊದಲಿನಿಂದಲೂ ಜಾಗವನ್ನು ಕೊಡಲಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಪ್ರದರ್ಶನ ಮುಗಿದ ಮೇಲೆ ಜಾಗವನ್ನು ಖಾಲಿ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಟಿ. ರಾಥೋಡ್.— ಖಾಲಿ ಮಾಡುತ್ತಾರೆ; ಈಗ ಮತ್ತೆ ಪ್ರಾರಂಭವಾಗುತ್ತಿದ್ದಾರೆ ; ಇನ್ನು ಸ್ವಾತಂತ್ರ್ಯಯೋಧರಾದಂಥ ಮಾನ್ಯ ನಂಜಪ್ಪನವರು ಸಹ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ : ಅದರಂತೆ ಮಾನ್ಯ ಕೃಷ್ಣನ್ ಅವರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ವೀರಸೌಧದ ಕಟ್ಟಡ ಎಜುಕೇಟಿವ್ ಆಗಿರಬೇಕು : ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥವರು ಬೇಕಾದಷ್ಟು ಜನರಿದ್ದಾರೆ: ಮತ್ತು ಆ ಸಂದರ್ಭದಲ್ಲಿ ಅನೇಕ ಘಟನೆಗಳು ನಡೆದಿವೆ, ಅವುಗಳೆಲ್ಲದರ ಸಂಕೇತವಾಗಿ ಈ ವೀರಸೌದವನ್ನು ನಿರ್ಮಾಣ ಮಾಡಬೇಕೆಂದು ಅವರು ಹೇಳಿದ್ದಾರೆ, ಈ ಬಗ್ಗೆ ನನಗನ್ನಿಸುತ್ತದೆ, ಏನೆಂದರೆ, ಮಾನ್ಯ ಕೆ. ಹನುಮಂತಯ್ಯನವರೇ ಈ ಒಂದು ಮಹತ್‌ಕಾರ್ಯವನ್ನು ಕೈಕೊಂಡಿರುವುದರಿಂದ, ಅವರೇ ಈ ಬಗ್ಗೆ ಕೆಲವು ರಚನಾತ್ಮಕ ವಿಚಾರಗಳು ಇರುತ್ತವೆ ; ಆದಕಾರಣ ಮಾನ್ಯ ಸದಸ್ಯರು ಹೇಳುವುದನ್ನು ಸಹ ಅವರು ಗಮನದಲ್ಲಿಟ್ಟುಕೊಂಡು ವೀರಸೌಧ ಕಟ್ಟುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ಆ ಕಟ್ಟಡದಲ್ಲಿ ಕೇವಲ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳು ಇರಬೇಕೇ ಹೊರತು ಹಾರಾಟಗಾರರ ಚಿತ್ರಗಳು ಅಲ್ಲಿರಬಾರದೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಟಿ. ರಾಥೋಡ್.— ಆ ಕಟ್ಟಡಕ್ಕೆ ಸರ್ಕಾರದವರು ಸಹ ಹಣದ ಸಹಾಯ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಸಹ ಸರ್ಕಾರ ಪರಿಶೀಲಿಸುತ್ತದೆ. ಈಗ ಲಾಲ್‌ಬಾಗ್‌ನಲ್ಲಿ ಕಲ್ಲಿನ ಬಂಡೆ ಜಾಗ ಏನಿದೆ, ಅದರ ಮೇಲೆ ಇದನ್ನು ಕಟ್ಟಿದರೆ ಚೆನ್ನಾಗಿರುವುದಿಲ್ಲವೆಂದು ಕೆಲವರು ಹೇಳಿದರು ; ಈಗ ಅಲ್ಲಿ ನಾವು ಜಾಗ ಕೊಡುತ್ತಿಲ್ಲ ; ಅವರು ಇಂತಹ ಕಡೆ ಜಾಗ ಕೊಡಬೇಕೆಂದು ಕೇಳಿದಾಗ ನಾನೂ ಸಹ ಆ ಸ್ಥಳಕ್ಕೆ ಹೋಗಿ ನೋಡಿದ್ದೇನೆ ; ಅದರಂತೆ ಅವರು ಅಪೇಕ್ಷೆಪಡುತ್ತಿರುವ ಜಾಗ ಆ ಕಲ್ಲಿನಬಂಡೆಯ ಪಕ್ಕದಲ್ಲಿದೆ ; ಆದಕಾರಣ ಆ ಕಲ್ಲಿನ ಬಂಡೆಯ ಸೌಂದರ್ಯವನ್ನು ಈಗಿರುವ ರೀತಿಯಲ್ಲಿಯೇ ಉಳಿಸಿಕೊಂಡು, ಅದರ ಪಕ್ಕದ ಜಾಗವನ್ನು ಅವರಿಗೆ ಕೊಡುತ್ತಿದ್ದೇವೆ. ಈ ಬಗ್ಗೆ ಜಿಯಾಲಾಜಿಕಲ್ ಅಂಡ್ ಸರ್ವೆ ಇಲಾಖೆಯವರ ಅಭಿಪ್ರಾಯವನ್ನು ಸಹ ಕೇಳಿ ಆ ಜಾಗ ಕೊಡುತ್ತಿದ್ದೇವೆ. ಮುಖ್ಯವಾಗಿ ಮಾನ್ಯ ಸದಸ್ಯರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅದೆಲ್ಲವನ್ನೂ ಗಮನದಲ್ಲಿಡುತ್ತೇವೆ. ತಾವುಗಳೆಲ್ಲರೂ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಕ್ಕಾಗಿ ಮತ್ತು ಇದನ್ನು ಸ್ವಾಗತ ಮಾಡಿದ್ದಕ್ಕಾಗಿ ತಮ್ಮೆಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೊನೆಯದಾಗಿ ಈ ತಿದ್ದುಪಡಿ ಮಸೂದೆಯನ್ನು ತಾವೆಲ್ಲರೂ ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER : The question is :

"That the Karnataka Governmet Parks (Preservation) (Amendment) Bill, 1976, as passed by the Legislative Council, be taken into consideration"

The motion was adopted

Clauses 2 & 3

MR. DEPUTY SPEAKER : The question is :

"That clauses 2 and 3 do stand part of the Bill.'

The motion was adopted

Clauses 2 and 3 were added to the Bill.

Clause 1, etc

MR. DEPUTY SPEAKER : The question is :

"That Clause 1, the long Title, the Preamble and the Enacting Formula do stand part of the Bill,"

The motion was adopted

Clause 1, the long Title, the Preamble and the Enacting Formula were added to the Bill.

Motion to Pass

SRI K. T. RATHOD : I move :

"That the Karnataka Government Parks (Preservation) (Amendment) Bill, 1976, as passed by the Legislative Council, be passed.',

MR. DEPUTY SPEAKER : The question is :

"That the Karnataka Government Parks (Preservation) (Amendment) Bill, 1976, as passed by the Legislative Council, be passed."

The motion was adopted and the Bill was passed

THE KARNATAKA VILLAGE PANCHAYATS (POSTPONEMENT OF ELECTIONS) (AMENDMENT) BILL, 1976 as Passed by LC

Motion to consider

SRI N. RACHAIAH (Minister for Rural Development and Social Welfare) : I move:

"That the Karnataka Village Panchayats (Postponement of Elections) (Amendment) Bill, 1976, as passed by the Legislative Council, be taken into consideration."

MR. DEPUTY SPEAKER : Motion moved :

"That the Karnataka Village Panchayats (Postponment of Elections) (Amendment) Bill, 1976, as passed by the Legislative Council, be taken into consideration."

† ಶ್ರೀ ಎನ್. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಈ ಒಂದು ಸಣ್ಣ ತಿದ್ದುಪಡಿ ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಇಡುತ್ತಿದ್ದೇನೆ. ಇದರ ಒಂದು ಉದ್ದೇಶವಾದರೂ ಕೂಡ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲ ಪಂಚಾಯಿತಿಗಳ ಚುನಾವಣೆಯನ್ನು ಡಿಸೆಂಬರ್—1976ರವರೆಗೆ ಮುಂದಕ್ಕೆ ಹಾಕಿರುವುದು ; ಈ ಮೊದಲು ಎಲ್ಲ ಪಂಚಾಯಿತಿಗಳ ಚುನಾವಣೆಯನ್ನು 1975ನೇ ಡಿಸೆಂಬರ್ ಅಂತ್ಯದೊಳಗೆ ಮಾಡುತ್ತೇವೆಂದು ಹೇಳಿ ನಾವು ಒಂದು ಕಾನೂನನ್ನು ಮಾಡಿದ್ದು ನಿಜ ; ಮತ್ತು ಅಷ್ಟರೊಳಗೆ ಚುನಾವಣೆಯನ್ನು ಮಾಡತಕ್ಕಂಥ ಒಂದು ಭರವಸೆಯನ್ನು ನಾನು ತಮಗೆ ಕೊಟ್ಟಿದ್ದೂ ಸಹ ನಿಜ ; ಈ ಬಗ್ಗೆ ಮಾನ್ಯ ಸದಸ್ಯರಾದಂತ ಶ್ರೀ ಮಾನ್ ಕೃಷ್ಣಪ್ಪನವರು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ ; ಅದಕ್ಕೆ ನಾನು ಉತ್ತರವನ್ನೂ ಸಹ ಕೊಟ್ಟಿದ್ದೇನೆ. ನಮ್ಮ ಒಂದು ಭರವಸೆಯ ಪ್ರಕಾರ ಚುನಾವಣೆ ಮಾಡಬೇಕು, ನಮ್ಮ ಒಂದು ಉದ್ದೇಶವನ್ನು ಈಡೇರಿಸಬೇಕೆಂಬ ಆತುರ ಇದ್ದರೂ ಸಹ, ಈಗ ರಾಷ್ಟ್ರೀಯ ತುರ್ತುಪರಿಸ್ಥಿತಿಯ ಕಾನೂನು ಘೋಷಣೆಯಾಗಿರುವ ಕಾರಣದಿಂದ ಈ ಚುನಾವಣೆಗಳನ್ನು ಸಹ ಮುಂದೂಡಬೇಕಾದ ಸ್ಥಿತಿ ಬಂದಿದೆ, ಈಗಾಗಲೇ ಪಾರ್ಲಿಮೆಂಟ್ ಚುನಾವಣೆಯನ್ನು ಸಹ ಮುಂದೂಡಲಾಗಿದೆ. ಅದರಂತೆ ಈ ಪಂಚಾಯಿತಿಗಳ ಚುನಾವಣೆಯನ್ನು ಈಗ ಮಾಡತಕ್ಕಂಥ ಅಗತ್ಯವಿಲ್ಲ ಎಂಬ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ ; ಈ ತುರ್ತುಪರಿಸ್ಥಿತಿ ಘೋಷಣೆಯಾದ ಮೇಲೆ ಜನತೆಗೆ ಪ್ರಗತಿದಾಯಕವಾದಂಥ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಕೈಕೊಂಡಿದೆ. ಈ ತುರ್ತುಪರಿಸ್ಥಿತಿ ರದ್ದಾದ ಕೂಡಲೆ ಈ ಚುನಾವಣೆಗಳನ್ನು ಆದಷ್ಟು ಬೇಗ ತಮ್ಮ ಒಂದು ಅಪೇಕ್ಷೆ ಪ್ರಕಾರ ಮತ್ತು